ಬೃಂದಾವನೀ ದೇವಿ ವಂದಿಸುವೆ ಶ್ರೀತುಳಸಿ ಮಂದಿರಳೆ ನಿನ್ನ ಪದಕೇ ।
ವಂದಾರು ಜನತತಿಗೆ ಮಂದಾರಳೆನಿಸಿರುವಿ ಸಂದೇಹವಿಲ್ಲವಿದಕೇ ॥ ೧॥

ಅಂದು ಧನ್ವಂತರಿಯು ತಂದಿರುವ ಪೀಯೂಷ ದಿಂದ ಪೂರಿತ ಕಳಶದೀ ।
ಇಂದಿರಾಪತಿಯ ಆನಂದಭಾಷ್ಪೋದಕದ ಬಿಂದು ಬೀಳಲು ಜನಿಸಿದಿ ॥ ೨ ॥

ಶ್ರೀತುಳಸಿ ನಿನ್ನನು ನಿಕೇತನದಿ ಪೂಜಿಪರ ಪಾತಕವ ಪರಿಹರಿಸುವೀ ।
ಶ್ರೀತರುಣಿಪತಿಗೆ ಬಲು ಪ್ರೀತಿ ವಿಷಯಳೆ ನಿನ್ನ ನಾ ಸ್ತುತಿಸಲೆಂತು ಜನನಿ ॥ ೩ ॥

ಸರ್ವ ತೀರ್ಥಗಳೆಲ್ಲ ತರು ಮೂಲದಲ್ಲಿಹವು ಸರ್ವ ವಿಭುದರು ಮಧ್ಯದೀ ।
ಸರ್ವ ವೇದಗಳೆಲ್ಲ ತರು ಅಗ್ರ ಭಾಗದಲಿ ಇರುತಿಹರು ಬಿಡದೆ ನಿರುತ ॥ ೪ ॥

ತುಳಸಿ ನಿನ್ನಯ ಲಕ್ಷ ದಳಗಳಿಂದಲಿ ಲಕ್ಷ್ಮೀ ನಿಲಯನಂಘ್ರಿಗಳರ್ಚಿಸೇ ।
ಕಲುಷ ವರ್ಜಿತರಾಗಿ ಬಲು ಬೇಗ ಶ್ರೀಹರಿಯ ಒಲುಮೆ ಪಡೆವನು ಜಗದೊಳು॥ ೫ ॥

ತುಳಸಿ ದೇವಿಯೆ ನಿನಗೆ ಜಲವೆರೆದು ಕುಂಕುಮದ ತಿಲಕವಿಡುತಲಿ ನಿತ್ಯದೀ ।
ಲಲನೆಯರು ಪೂಜಿಸಲು ಒಲಿದಿತ್ತು ಸೌಭಾಗ್ಯ ಸಲಹುವೆ ಕರುಣದಿಂದಾ ॥ ೬॥

ಮಾಧವ ಪ್ರಿಯ ತುಳಸಿ ಸಾದರದಿ ನಿನ್ನೊಳಗೆ ಶ್ರೀದೇವಿ ನಿಂದಿರುವಳೂ ।
ವೋದ ಮುನಿ ಶಾಸ್ತ್ರವನು ಭೋದಿಸುವ ಬುಧ ಜನರ ಪಾದ ಸೇವೆಯಕರುಣಿಸು ॥ ೭ ॥

ಮಿತ್ರನುದಯದಲೆದ್ದು ಚಿತ್ತ ನಿರ್ಮಲರಾಗಿ ಭಕ್ತಿಯಲಿ ಶ್ರೀತುಳಸಿಯಾ ।
ಮೃತ್ತಿಕೆಯ ಧರಿಸಿದ ಮಹಾತ್ಮರನು ಕಂಡು ಯಮ ಭೃತ್ಯರಂಜುವರುಭಯದೀ ॥ ೮ ॥

ಇಂತು ಶ್ರೀತುಳಸಿ ಶ್ರೀಮಂತಿನಿಯ ಸ್ತೋತ್ರವ ನಿರಂತರದಿ ಪಠಿಸುವವರ ।
ಚಿಂತಿತಪ್ರದನಾಗಿ ನಿಂತು ಕಾರ್ಪರದಿ ಶ್ರೀಕಾಂತ ನರಹರಿ ಪೊರೆವನು ॥ ೯ ॥

ಬೃಂದಾವನಿದೇವಿ ವಂದಿಸುವೆ ಶ್ರೀತುಳಸಿ ಮಂದಿರಳೆ ನಿನ್ನ ಪದಕೇ ।
ವಂದಾರು ಜನತತಿಗೆ ಮಂದಾರಳೆನಿಸಿರುವಿ ಸಂದೇಹವಿಲ್ಲವಿದಕೆ ॥

Brundavanee devi

ಎತ್ತಿದಳಾರತಿಯಾ ಶ್ರೀ ತುಳಸಿಗೆ । ಭಕ್ತಿ ಭಾವಗಳಿಂದಲಿ ॥ ಪ ॥

ಎತ್ತಿದಳಾರತಿ ಸತ್ಯಧರ್ಮನ ಸತಿ । ಅಚ್ಯುತನ ತೋರೆಂದು ಅತಿ ದೈನ್ಯದಿಂದಲಿ ॥ ಅ. ಪ.॥

ಗಂಧ ಅರಿಷಿಣ ಕುಂಕುಮ । ಪಾಂಚಾಲಿ ತಾ ವೃಂದಾವನ ಪೂಜಿಸಿ ॥
ದುಂಡು ಮಲ್ಲಿಗೆ ಕರ್ಪೂರ ಧೂಪ ದೀಪಗಳಿಂದ ।
ಇಂದ್ರ ನಂದನ ಸತಿ ಒಂದೇ ಮನಸಿನಿಂದ ॥ ೧ ॥

ಹಾರ ಕೇಯೂರದಿಂದ । ಮುಕ್ತಾವಳಿ ನಾರಿ ತುಳಸಿಗೆ ಅರ್ಚಿಸಿ ॥
ಚಾರು ಹಸ್ತಗಳಿಂದ ನಾರಿ ಬೊಗಸೆಯ ಒಡ್ಡಿ ।
ವಾರಿಜನಾಭನ ತೋರಿಸೆಂದೆನುತಲಿ ॥ ೨ ॥

ಅನ್ನ ಬೇಡಲು ಮುನಿಗಳು । ಪತಿಗಳು ಬಂದು ನನ್ನನ್ನೆ ಕೇಳುವರು ।
ಪನ್ನಂಗವೇಣಿ ನಾ ನಿನ್ನ ಮೊರೆ ಹೊಕ್ಕೆನೆ ।
ಪನ್ನಂಗ ಶಯನನ ತೋರು ತೋರೆನುತಲಿ ॥ ೩ ॥

ಕ್ಷುದದಿಂದಾದವರು ತಪಸಿಗಳೆಂದು ಪತಿಗಳು ಹೇಳಿದರು ।
ಪತಿದಾಯಕಿ ನಿನ್ನ ಪತಿ ಶ್ರೀ ಕೃಷ್ಣನ್ನ ।
ಅಚ್ಯುತಾನಂತನ ತೋರೆಂದು ತುಳಸಿಗೆ ॥ ೪ ॥

ಬೇಡಿದ ಭಕ್ತರಿಗೆ ಶ್ರೀ ತುಳಸಿಯು । ಸಾಯುಜ್ಯ ಪದವಿ ನೀಡಿ ॥
ವಾರಿಜ ನಾಭನ ತೋರುವೆನೆನುತಲಿ ।
ತೋರಿದಳ್ ಭೀಮೇಶ ಕೃಷ್ಣನ ಸತಿ ತುಳಸಿಗೆ ॥ ೫ ॥

Ettidalaaratiyaa shree tulasige

ಕಲ್ಯಾಣಂ ತುಳಸಿ ಕಲ್ಯಾಣಂ ॥ ಪ ॥

ಕಲ್ಯಾಣವೇ ನಮ್ಮ ಶ್ರೀಕೃಷ್ಣ ತುಳಸಿಗೆ ।
ಬಲ್ಲಿದ ಶ್ರೀವಾಸುದೇವನಿಗೆ ॥ ಅ.ಪ. ॥

ಅಂಗಳದೊಳಗೆಲ್ಲಾ ತುಳಸಿಯ ವನ ಮಾಡಿ ।
ಶ್ರೀಂಗಾರವ ಮಾಡಿ ಶೀಘ್ರದಿಂದ ॥
ಕಂಗಳ ಪಾಪವ ಪರಿಹರಿಸುವ ಮುದ್ದು ।
ರಂಗ ಬಂದಿಲ್ಲಿ ನೆಲೆಸಿಹನು ॥ ೧ ॥

ಮಿಂದು ಮಡಿಯನುಟ್ಟು । ಸಂದೇಹವ ಬಿಟ್ಟು ।
ತಂದು ಶ್ರೀಗಂಧಾಕ್ಷತೆಗಳಿಂದಾ ।
ಸಿಂಧು ಶಯನನ ವೃಂದಾವನದಿ ಪೂಜಿಸೆ ।
ಕುಂದದ ಭಾಗ್ಯವ ಕೊಡುತಿಹಳು ॥ ೨ ॥

ಭಕ್ಷ್ಯ ಭೋಜ್ಯಂಗಳ ನೈವೇದ್ಯವನಿಟ್ಟು ।
ಲಕ್ಷ್ಯ ಬತ್ತಿಯ ದೀಪವ ಹಚ್ಚಿ ॥
ಅಧೋಕ್ಷಜ ಸಹಿತ ವೃಂದಾವನದಿ ಪೂಜಿಸೆ ।
ಸಾಕ್ಷಾತ್ ಮೋಕ್ಷವ ಕೊಡುತಿಹಳು ॥ ೩ ॥

ಉತ್ಥಾನ ದ್ವಾದಸಿ ದಿವಸದಿಂದಲಿ ।
ಶ್ರೀಕೃಷ್ಣ ಉತ್ತಮ ತುಳಸಿಗೆ ವಿವಾಹವ ।
ಚಿತ್ತ ನಿರ್ಮಲರಾಗಿ ಮಾಡಿದವರಿಗೆ ।
ಉತ್ತಮ ಗತಿ ಈವ ಪುರುಂದರ ವಿಠಲ ॥ ೪ ॥

Kalyaanam tulasi kalyaanam

ತುಳಸಿ ಮಧ್ಯದಿ ಇರುವ ಕೃಷ್ಣನ ಬಳಸಿ ನೋಡುವ ಬನ್ನಿರೆ ||ಪ||

ಗೊಲ್ಲ ಸತಿಯರ ಗಲ್ಲ ಪಿಡಿದುಎಲ್ಲ ನಟನೆಯ ತೋರುವ
ಫುಲ್ಲ ನಾಭನಮೆಲ್ಲ ಮೆಲ್ಲನೆಎಲ್ಲ ಹೆಂಗಳು ನೋಡಿರೆ ||1||

ಕಾಮಿ ಜನರಿಗೆ ಕಾಮಿತಾರ್ಥವಪ್ರೇಮದಿಂದಲಿ ಕೊಡುತಿಹ
ಕಾಮನೈಯನ ಚರಣ ಕಮಲವನಂಬಿ ಬದುಕುವ ಬನ್ನಿರೆ||2||

ಅಂಗರಾಗ ಶ್ರೀರಂಗ ಮಂಗಳಸಿಂಗರದಿ ತಾ ನಿಂತಿಹಮಂಗಳಾಂಗನ
ಮಂಗಳಾರತಿಎಲ್ಲ ಹೆಂಗಳು ನೋಡಿರೆ ||3||

ಒಂದು ಕೈಯಲಿ ಗಂಧಪುಷ್ಪ ಮ-ತ್ತೊಂದು ಕೈಯಲಿ ರಂಗನು
ಮಂದಹಾಸದಿ ಇಂದುಮುಖಿಯರಿ-ಗ್ವೊಂದಿಸುವನತಿ ಚಂದದಿ ||4||

ಶುಕ್ರವಾರದಿ ಪೂಜೆಗೊಂಬು ವಚಕ್ರಧರ ಶ್ರೀಕೃಷ್ಣನು ನಕ್ರಹರ
ತ್ರಿವಿಕ್ರಮನು ಮನ-ವಾಕ್ರಮಿಸಿ ಸುಖ ಕೊಡುತಿಹ ||5||

[Tulasi madhyadhi iruva krushnana]

ಒಲ್ಲನೋ ಹರಿ ಕೊಳ್ಳನೋ ।(ಪ)

ಎಲ್ಲಾ  ಸಾಧನವಿದ್ದು ತುಳಸಿ ಇಲ್ಲದ ಪೂಜೆ ॥(ಅ. ಪ.)

ಸಿಂಧು ಶತಕೋಟಿ  ಗಂಗೋದಕವಿದ್ದು
ಗಂಧ  ಸುಪರಿಮಳ  ವಸ್ತ್ರಗಳಿದ್ದು ।
ಚಂದುಳ್ಳ ಆಭರಣ  ಧೂಪಗಳಿದ್ದು
ಬೃಂದಾವನ ಶ್ರೀ ತುಳಸಿಯಿಲ್ಲದ ಪೂಜೆ ॥೧॥

ದಧಿ ಕ್ಷೀರ  ಮೊದಲಾದ  ಅಭಿಷೇಕಗಳಿದ್ದು
ಮಧುಪರ್ಕ ಪಂಚೋಪಚಾರವಿದ್ದು ।
ಮುದದಿಂದ ಮುದ್ದು ಶ್ರೀ ಕೃಷ್ಣನ ಪೂಜೆಗೆ
ಸದಮದಳಾದ  ಶ್ರೀ ತುಳಸಿಯಿಲ್ಲದ ಪೂಜೆ ॥೨॥

ಮಂತ್ರ ಮಹಾ ಮಂತ್ರ  ಪುರುಷಸೂಕ್ತಗಳಿದ್ದು
ತಂತು ತಪ್ಪದೆ ತಂತ್ರಸಾರವಿದ್ದು ।
ಸಂತತ  ನಿಜ ಸಂಪೂರ್ಣನ ಪೂಜೆಗೆ
ಅತ್ಯಂತ ಪ್ರಿಯಳಾದ  ತುಳಸಿಯಿಲ್ಲದ ಪೂಜೆ ॥೩॥

ಕಮಲ ಮಲ್ಲಿಗೆ ಜಾಜಿ  ಸಂಪಿಗೆ ಕೇದಿಗೆ
ವಿಮಲ ಘಂಟೆ ಪಂಚ ವಾದ್ಯಗಳಿದ್ದು।
ಅಮಲ ಪಂಚಭಕ್ಷ್ಯ ಪರಮಾನ್ನಗಳಿದ್ದು
ಕಮಲನಾಭನು   ಪ್ರಿಯ  ಶ್ರೀ ತುಳಸಿಯಿಲ್ಲದೆ  ಪೂಜೆ ॥೪॥

ಪೂಜೆಯ ಮಾಡದ  ತುಳಸಿಮಂಜರಿಯಿಂದ
ಮೂಜಗದೊಡೆಯ  ಮುರಾರಿಯನ್ನು  ।
ರಾಜಾಧಿರಾಜನೆಂಬ   ಮಂತ್ರ ಪುಷ್ಪಗಳಿಂದ
ಪೂಜಿಸಿದರು  ಒಲ್ಲ  ಪುರಂದರವಿಠಲನು  ॥೫॥

importance of tulasi in pooja(Ollano hari kollano)

ಬೃಂದಾವನವೇ ಮಂದಿರವಾಗಿಹ ಇಂದಿರೆ ಶ್ರೀ ತುಳಸಿ|ಪ|

ನಂದ ನಂದನ ಮುಕುಂದಗೆ ಪ್ರಿಯಳಾದ ಚಂದದ ಶ್ರೀ ತುಳಸಿ |ಅ.ಪ|

ತುಳಸಿಯ ವನದಲಿ ಹರಿ ಇಹನೆಂಬುದ ಶೃತಿ ಸಾರುತಿದೆ ಕೇಳಿ
ತುಳಸಿ ದರ್ಶನದಿಂದ ದುರಿತಗಳೆಲ್ಲವು ದೂರವಾಗುವುದು ಕೇಳಿ
ತುಳಸಿ ಸ್ಪರ್ಶವ ಮಾಡೇ, ದೇಹಪಾವನವೆಂದು ತಿಳಿದುದಿಲ್ಲವೇ ಕೇಳಿ
ತುಳಸಿ ಸ್ಮರಣೆ ಮಾಡಿ ಸಕಲ ಇಷ್ಟವ ಪಡೆದು ಸುಖದಲಿ ನೀವು ಬಾಳಿ ||೧||

ಮೂಲ ಮೃತ್ತಿಕೆಯನು ಮುಖದಲಿ ಧರಿಸಲು ಮೂಲೋರ್ಕ ವಶವಹುದು
ಮಾಲೆ ಕೊರಳಲಿಟ್ಟ ಮನುಜಗೆ ಮುಕುತಿಯ ಮಾರ್ಗವು ತೋರುವುದು
ಕಾಲ ಕಾಲಗಳಲಿ ಮಾಡಿದ ದುಷ್ಕರ್ಮ ಕಳೆದು ಬಿಸುಟು ಪೋಗುವುದು
ಕಾಲನ ದೂತರ ಕಳಚಿ ಕೈವಲ್ಯದ ಲೀಲೆಯ ತೋರುವುದು ||೨||

ಧರೆಯೊಳು ಸುಜನರ ಮರೆಯದೆ ಸಲಹುವ ವರಲಕ್ಷ್ಮೀ ಶ್ರೀ ತುಳಸಿ
ಪರಮಭಕ್ತರ ಘೋರ ಪಾಪಗಳ ತರಿದು ಪಾವನ ಮಾಡುವ ತುಳಸಿ
ಸಿರೀಯಾಯುಪುತ್ರಾದಿ ಸಂಘದಗಳನಿತ್ತು ಹರುಷ ನೀಡುವಳು ತುಳಸಿ
ಪುರಂದರ ವಿಠಲನ ಚರಣ ಕಮಲಗಳ ಸ್ಮರಣೆ ಕೊಡುವಳು ತುಳಸಿ||೩||

Vrundavanave mandiravagiha